ಕವಿತೆ




## ಚಿದಾನಂದ ಸಾಲಿ

ಕಲೆ:ಆದಿಸ್ವರೂಪ




# ಹೊಸ ಭಾಷೆ

ಅಶ್ರುಗ್ರಂಥಿ ಬತ್ತಿಸಿಕೊಂಡಿರುವ, ಅತಿದುಃಖಿ ಗಂಡು– ಆಕ್ರೋಶದಲ್ಲೂ
ಆಕ್ರೋಶ ಹತ್ತಿಕ್ಕಿಕೊಂಡಿರುವ, ಹುಸಿವಿನಯಿ ಹೆಣ್ಣು– ಅಶ್ರುಬಿಂದುವಿನಲ್ಲೂ
ನುಡಿಯುತ್ತಿದ್ದಾರೆ–

ಇವನ ಆಕ್ರೋಶವು ಅಳುವೆಂದು ಅವಳಿಗೆ ಅರ್ಥವಾಗುತ್ತಿಲ್ಲ
ಅವಳ ಅಳುವು ಆಕ್ರೋಶವೆಂದು ಇವನಿಗೆ ತಿಳಿಯುತ್ತಿಲ್ಲ

ಇಬ್ಬರದೂ ಒಂದೇ ದೂರು: 'ನೀನು ನನ್ನನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ!'

ಪರಸ್ಪರರ ಮನವರಿಕೆ ಮಾಡಿಸಲು ತಕ್ಕ ಪದಾಯುಧಗಳು ದೊರೆಯದೆ
ರಣಾಂಗಣದಲಿ ನಿಸ್ಸಹಾಯಕರಾಗಿರುವ ನಿರಾಯುಧ ಗಾಯಾಳುಗಳಿವರು

*

ಅಳುಮುಂಜಿ ಗಂಡು, ಹಟಮಾರಿ ಹೆಣ್ಣುಗಳ ನಂಬಬಾರದು–
ಎಂದು ಕಲಿಸುತ್ತಾ ಬಂದ ತಾಯ್ತಂದೆಯರಿಗೆ ಧಿಕ್ಕಾರವಿರಲಿ

ಕಲ್ಲೆದೆಯ ಹುಡುಗರೇ... ಕಣ್ಣೀರ ಭಾಷೆಯಲಿ ಕರಗಿ ನೀರಾಗಿರಿ
ಕೋಮಲ ಹುಡುಗಿಯರೇ.. ಆಕ್ರೋಶದ ಭಾಷೆಯಲಿ ಅಬ್ಬರಿಸಿರಿ

2

ಇಬ್ಬಾಯ ಖಡುಗ
ಹಿಡಿಯಿರದ ಇಬ್ಬಾಯ ಖಡುಗವೊಂದನ್ನು ನೀಡಿ
ಇಬ್ಬರಿಗೂ ಹಿಡಿದುಕೊಳ್ಳಲು ಹೇಳಲಾಯಿತು
ಮದುವೆಯೆಂಬುದದರ ಲೋಕರೂಢಿ ಹೆಸರೆಂದು
ಹಿಡಿದುಕೊಂಡಾದ ಮೇಲೆ ತಿಳಿಸಲಾಯಿತು

ಶತ್ರುಗಳ ಕೊಚ್ಚಲು, ಮಿತ್ರರ ಮೆಚ್ಚಿಸಲು

